ನಿಮ್ಮೊಡನೆ

# ಐ.ಟಿ ಕ್ಷೇತ್ರದ ಸಂಕಷ್ಟ

ಐ.ಟಿ ಉದ್ಯೋಗ ಕ್ಷೇತ್ರದ ಹಿಂಜರಿಕೆಗೆ ಹಲವು ಕಾರಣಗಳಿವೆ. ಅದರಲ್ಲಿ ಮುಖ್ಯವಾದದ್ದು ನಮ್ಮ ಮಾನವ ಸಂಪನ್ಮೂಲ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಹೊಂದಿಕೊಳ್ಳದೆ ಇರುವುದು.

ಐ.ಟಿ ಉದ್ಯಮದಿಂದ ಇತ್ತೀಚೆಗೆ ಅಪ್ರಿಯ ಸುದ್ದಿಗಳೇ ಕೇಳಿಬರುತ್ತಿವೆ. 'ಭಾರತದ ಐ.ಟಿ ರಾಜಧಾನಿ' ಎಂಬ ಹೆಸರನ್ನು ಇನ್ನೂ ಉಳಿಸಿಕೊಂಡಿರುವ ಬೆಂಗಳೂರಿನಲ್ಲಿ ಅಂದಾಜು 18 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಮಾಹಿತಿ– ತಂತ್ರಜ್ಞಾನ ಕ್ಷೇತ್ರದಲ್ಲಿವೆ ಎಂದು ಅಂದಾಜಿಸಲಾಗಿದೆ. ಆದರೆ ಇತ್ತೀಚೆಗೆ ಬಹುತೇಕ ಕಂಪೆನಿಗಳಿಂದ ಉದ್ಯೋಗ ಕಡಿತದ ವರದಿಗಳು ಬರುತ್ತಿವೆ. ಬೆಂಗಳೂರಿನ ಪ್ರತಿಷ್ಠಿತ ಐಟಿ ಕಂಪೆನಿಯಾದ ಇನ್‌ಫೋಸಿಸ್‌ನ ಸ್ಥಾಪಕರಾದ ಎನ್.ಆರ್. ನಾರಾಯಣಮೂರ್ತಿಯವರೇ ಸ್ವತಃ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಐ.ಟಿ ಉದ್ಯೋಗ ಕಡಿತದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ವಹಿವಾಟು ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಸವಾಲುಗಳನ್ನು ಎದುರಿಸಲು ದೊಡ್ಡ ಸಂಖ್ಯೆಯಲ್ಲಿ ಮಧ್ಯಮ ಮತ್ತು ಹಿರಿಯ ಶ್ರೇಣಿಯ ಉದ್ಯೋಗಿಗಳನ್ನು ಕೈಬಿಡುವುದಾಗಿ ಈಗಾಗಲೆ ಇನ್‌ಫೋಸಿಸ್ ಟೆಕ್ನಾಲಜೀಸ್ ಪ್ರಕಟಿಸಿದೆ. ಇನ್ನೆರಡು ದೈತ್ಯ ಕಂಪೆನಿಗಳಾದ ವಿಪ್ರೊ ಮತ್ತು ಕಾಗ್ನಿಜೆಂಟ್ ಕೂಡಾ ಉದ್ಯೋಗ ಕಡಿತದ ನಿರ್ಧಾರಗಳನ್ನು ಘೋಷಿಸಿವೆ. ಬೆಂಗಳೂರಿನಲ್ಲಿ ದೊಡ್ಡ ಮಟ್ಟದ ಅಸ್ತಿತ್ವ ಹೊಂದಿರುವ ಅಮೆರಿಕ ಮೂಲದ ಕಾಗ್ನಿಜೆಂಟ್ ಕಂಪೆನಿ ಈಗಾಗಲೆ, ನಿರ್ದೇಶಕರು, ಸಹ ಉಪಾಧ್ಯಕ್ಷರು ಮತ್ತು ಹಿರಿಯ ಉಪಾಧ್ಯಕ್ಷರಿಗೆ ಆರರಿಂದ ಒಂಬತ್ತು ತಿಂಗಳ ಸಂಬಳ ಕೊಟ್ಟು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ. ವಿಪ್ರೊ ತನ್ನ ವಾರ್ಷಿಕ ಸಾಧನೆ ಪರಿಶೀಲನೆಯ ನೆಪದಲ್ಲಿ 600ರಷ್ಟು ನೌಕರರನ್ನು ಕೈಬಿಟ್ಟಿದ್ದು ಈ ಸಂಖ್ಯೆ 2000ಕ್ಕೆ ತಲುಪಬಹುದು ಎನ್ನಲಾಗಿದೆ. ಉದ್ಯೋಗ ಮಾರುಕಟ್ಟೆಯಲ್ಲಿ ಸಕ್ರಿಯವಾಗಿರುವ 'ಹೆಡ್ ಹಂಟರ್ಸ್ ಇಂಡಿಯಾ' ಸಂಸ್ಥೆಯ ವರದಿಯ ಪ್ರಕಾರ, ಭಾರತದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಐಟಿ ಕ್ಷೇತ್ರವೊಂದರಲ್ಲೇ ಪ್ರತಿ ವರ್ಷ 1.75 ಲಕ್ಷದಿಂದ 2 ಲಕ್ಷದವರೆಗೆ ಉದ್ಯೋಗ ಕಡಿತವಾಗಲಿದೆ.

ಐ.ಟಿ ಉದ್ಯೋಗ ಕ್ಷೇತ್ರದ ಈ ಹಿಂಜರಿಕೆಗೆ ಹಲವು ಕಾರಣಗಳಿವೆ. ಅದರಲ್ಲಿ ಮುಖ್ಯವಾದದ್ದು ನಮ್ಮ ಮಾನವ ಸಂಪನ್ಮೂಲ ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ಹೊಂದಿಕೊಳ್ಳದೆ ಇರುವುದು. ವಾರ್ಷಿಕ 140 ಶತಕೋಟಿ ಡಾಲರ್ ವಹಿವಾಟು ನಡೆಸುವ ಭಾರತದ ಐಟಿ ಉದ್ಯಮ, ಬದಲಾಗುತ್ತಿರುವ ಡಿಜಿಟಲ್ ವಾತಾವರಣಕ್ಕೆ ಹೊಂದಿಕೊಳ್ಳಲು ಹೆಣಗುತ್ತಿರುವುದು ಎದ್ದು ಕಾಣುತ್ತಿದೆ. ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಡಿಗ್ರಿ ಪೂರ್ಣಗೊಳಿಸುವುದರ ಜತೆಗೇ ಕೌಶಲ ವೃದ್ಧಿಗೂ ಮಹತ್ವ ನೀಡಬೇಕೆಂಬ ಎಚ್ಚರ ಇತ್ತೀಚೆಗಷ್ಟೇ ಮೂಡಿದೆ. ಕಾಲೇಜಿನಿಂದ ಹೊರಬರುವಾಗಲೇ ಉದ್ಯೋಗ ಮಾರುಕಟ್ಟೆಗೆ ಬೇಕಾದ ಕೌಶಲಗಳನ್ನು ಹೊಂದುವುದಕ್ಕೆ ವಿದ್ಯಾರ್ಥಿಗಳನ್ನು ಎಷ್ಟು ವೇಗವಾಗಿ ತಯಾರು ಮಾಡಬೇಕೋ ಅದನ್ನು ನಾವು ಮಾಡುತ್ತಿಲ್ಲ. ನಾಸ್ಕಾಮ್ ಇಂಡಿಯಾ ಲೀಡರ್‌ಷಿಪ್ ವೇದಿಕೆಯಲ್ಲಿ ಇತ್ತೀಚೆಗೆ 'ಮೆಕೆನ್ಸಿ ಅಂಡ್ ಕಂಪೆನಿ' ಸಲ್ಲಿಸಿದ ವರದಿಯಲ್ಲಿ, ಭಾರತದ ಐಟಿ ಸೇವಾ ಕಂಪೆನಿಗಳಲ್ಲಿರುವ ಅರ್ಧದಷ್ಟು ಮಾನವ ಸಂಪನ್ಮೂಲವು ಮುಂದಿನ 3–4 ವರ್ಷಗಳಲ್ಲಿ ಅಪ್ರಸ್ತುತವಾಗಲಿದೆ ಎಂದು ಎಚ್ಚರಿಸಿರುವುದು ಗಮನಾರ್ಹ.

ಭಾರತದ ಐಟಿ ವಲಯದ ಬಹುದೊಡ್ಡ ಶಕ್ತಿಯಾಗಿರುವ ಹೊರಗುತ್ತಿಗೆ ವಹಿವಾಟು ಕೂಡಾ ಕ್ಷಿಪ್ರ ಬದಲಾವಣೆಗಳನ್ನು ಎದುರಿಸುತ್ತಿದೆ. ಮುಖ್ಯವಾಗಿ ಅಮೆರಿಕದ ಡೊನಾಲ್ಡ್ ಟ್ರಂಪ್ ಸರಕಾರ ಜಾರಿಗೆ ತಂದಿರುವ ಹೊಸ ಐಟಿ ಉದ್ಯೋಗ ನೀತಿಯಿಂದಾಗಿ, ಭಾರತೀಯರು ಅಲ್ಲಿ ಪಡೆಯುತ್ತಿದ್ದ ಎಚ್1ಬಿ ವೀಸಾಗಳ ಸಂಖ್ಯೆಯಲ್ಲಿ ದೊಡ್ಡ ಸಂಖ್ಯೆಯ ಕಡಿತವಾಗಿದೆ. ಅಮೆರಿಕನ್ನರಿಗೇ ಹೆಚ್ಚಿನ ಉದ್ಯೋಗಗಳನ್ನು ಒದಗಿಸುವ ಹೊಸ ನೀತಿಗೆ ಭಾರತೀಯ ಕಂಪೆನಿಗಳೂ ಒಗ್ಗಲೇಬೇಕಿದೆ. ದೊಡ್ಡ ಮೊತ್ತದ ಸಂಬಳ ಪಡೆಯುವ ನೌಕರರನ್ನು ಬಿಟ್ಟರೆ, ಉಳಿದವರೆಲ್ಲ ಭಾರತಕ್ಕೆ ಗಂಟುಮೂಟೆ ಕಟ್ಟುವ ಪ್ರಕ್ರಿಯೆ ಈಗಾಗಲೆ ಆರಂಭವಾಗಿದೆ. ಕಳೆದ ವಾರ ದುಬೈಯ ಐ.ಟಿ ಕಂಪೆನಿಗಳಿಂದ 4000ಕ್ಕೂ ಹೆಚ್ಚು ಉದ್ಯೋಗಿಗಳು ಕೆಲಸ ಕಳೆದುಕೊಂಡು ಭಾರತಕ್ಕೆ ವಾಪಸಾದದ್ದು ದೊಡ್ಡ ಸುದ್ದಿಯಾಗಿತ್ತು.

ಮುಂದಿನ ದಿನಗಳಲ್ಲಿ ಐ.ಟಿ ಕಂಪೆನಿಗಳು ಆಕರ್ಷಕ ಸಂಬಳ– ಸವಲತ್ತುಗಳನ್ನು ಕೊಡುವ ಕಂಪೆನಿಗಳಾಗಿ ಉಳಿಯುವುದಿಲ್ಲ ಎಂಬ ಗೋಡೆಬರಹವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಬಿಇ ಅಥವಾ ಬಿಟೆಕ್ ಮಾಡುವಾಗ ಮುಂದಿನ ದಿನಗಳಲ್ಲಿ ಯಾವ ಶಾಖಾಜ್ಞಾನಗಳಿಗೆ ಹೆಚ್ಚಿನ ಬೇಡಿಕೆ ಒದಗಿಬರುತ್ತದೆ ಎನ್ನುವುದನ್ನು ಅಂದಾಜಿಸಿ ಕೋರ್ಸ್‌ಗಳಿಗೆ ಸೇರಬೇಕು. ಜತೆಗೆ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೌಶಲವೃದ್ಧಿಗೆ ಬೇಕಾದ ಪಠ್ಯಪರಿವರ್ತನೆಗಳನ್ನು ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಉದ್ಯೋಗಸೃಷ್ಟಿಯ ನಿಟ್ಟಿನಲ್ಲಿ 'ಸ್ಟಾರ್ಟಪ್ ಕಂಪೆನಿ'ಗಳ ಸ್ಥಾಪನೆಗೆ ಹೆಚ್ಚು ಒತ್ತು ಕೊಡಲು ಸರ್ಕಾರವೂ ಹೊಸ ಯೋಜನೆಗಳನ್ನು ರೂಪಿಸಬೇಕು.

■ ಬಿ.ಎಂ. ಹನೀಫ್



ಗಣೇಶ ಆರಳಿಕಟ್ಟೆ